ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ಕಛೇರಿಯಲ್ಲಿ ದಿನಾಂಕ: 06-01-2021 ರಂದು ನಡೆದ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಜನವರಿ-2021 ರ ಮಾಹೆಯ ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 06-01-2021 ರಂದು ನೆಡೆಸಲಾಯಿತು.

**ಸಭೆಗೆ ಹಾಜರಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಟಿ. ಡಿ. ಮಂಜುನಾಥ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು ವಾರ್ಡ್-112 (ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ) |
| 2 | ಎನ್.ಎಸ್. ಪ್ರಕಾಶ್ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 112 |
| 3 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 4 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 5 | ಮಂಜುನಾಥ | ಸಹಾಯಕ ಅಭಿಯಂತರರು ಎಸ್-3, ಬೆಸ್ಕಾಂ |
|  | ಚಂದ್ರಪ್ಪ | ಸಹಾಯಕ ಕಂದಾಯ ಅಧಿಕಾರಿ ದೊಮ್ಮಲೂರು ಉಪ ವಿಭಾಗ |
| 6 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬೋರ್‌ವೆಲ್ |
| 7 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 8 | ಪುರುಷೋತ್ತಮ | ಸಮಿತಿ ಸದಸ್ಯರು & ಕಿರಿಯ ಆರೋಗ್ಯ ಪರಿವೀಕ್ಷಕರುವಾರ್ಡ್ ಸಂಖ್ಯೆ: 112 |
| 9 | ಬಿ ಚಂದ್ರಶೇಖರ್ | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ, ಬಿಬಿಎಂಪಿ |
| 10 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 11 | ಶಶಿಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 12 | ಗಾಯತ್ರಿ | ಟೈಲರಿಂಗ್ ಶಿಕ್ಷಕರು, ವಾರ್ಡ್ ಸಂಖ್ಯೆ: 112 ದೊಮ್ಮಲೂರು, ಬಿಬಿಎಂಪಿ |

| | | |
|---|---|---|
| 13 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 14 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು<br>ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು | | |
| 1 | ಪಿ. ಕುಮಾರ್ | ವಾರ್ಡ್ ಸಮಿತಿ ಸದಸ್ಯರು |
| 2 | ಪುಲಿಕೇಶಿ ರೆಡ್ಡಿ | ವಾರ್ಡ್ ಸಮಿತಿ ಸದಸ್ಯರು |
| 3 | ವಿಜಯ್ ಎಂ ಬಿ | ವಾರ್ಡ್ ಸಮಿತಿ ಸದಸ್ಯರು |
| 4 | ಕಲ್ಯಾಣಿ | ವಾರ್ಡ್ ಸಮಿತಿ ಸದಸ್ಯರು |

ದಿನಾಂಕ: 06-01-2021 ರಂದು ಪೂರ್ವಹ್ನ 11-00 ಗಂಟೆಗೆ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಎನ್. ಎಸ್. ಪ್ರಕಾಶ್, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ ವಿಜಯ್ ಎಂ ಬಿ ರವರು ಮೊದಲಿಗೆ ಪಾಲಿಕೆಯ ಅರಣ್ಯ ಇಲಾಖೆಯ ಸಿಬ್ಬಂಧಿಯಾದ ಶ್ರೀ ದೇವರಾಜ್ ರವರಿಗೆ ಮತ್ತು ಘನತ್ಯಾಜ್ಯ ನಿರ್ವಹಣೆ ವಿಭಾಗದ ನೌಕರರಾದ ಶ್ರೀ ಜಗದೀಶ್ ರವರಿಗೆ ದೊಮ್ಮಲೂರು ವಾರ್ಡಿನ ನಿವಾಸಿಗಳ ಪರವಾಗಿ ಧನ್ಯವಾದವನ್ನು ತಿಳಿಸಿದರು.

<u>ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.</u>

1. **ಶ್ರೀ ವಿಜಯ್ ಕುಮಾರ್ ಎಂ. ಬಿ ರವರು ಸಲ್ಲಿಸಿರುವ ಮನವಿ.**
   a) ಕೇಂಬ್ರಿಡ್ಜ್ ಬಡಾವಣೆಯಲ್ಲಿರುವ ಉದ್ಯಾನವನದ ನಿರ್ವಹಣೆ ಕುರಿತು.
   b) ಕೇಂಬ್ರಿಡ್ಜ್ ಬಡಾವಣೆಯ 1ನೇ ಎ ಅಡ್ಡರಸ್ತೆ ಮತ್ತು 2ನೇ ಮುಖ್ಯರಸ್ತೆಯಲ್ಲಿ Road Hump ಹಾಕಲು ಮನವಿ.
   c) ಡಾ॥ ರಾಜ್ ಕುಮಾರ್ ಪಾರ್ಕಿನಲ್ಲಿರುವ ಹಾಳಾಗಿರುವ Shuttle court ನ್ನು ದುರಸ್ಥಿ ಮಾಡಲು ಮನವಿ.
   d) ವಾರ್ಡಿನಲ್ಲಿ Peace committee ಮಾಡಲು ಮನವಿ ಮಾಡಿರುತ್ತಾರೆ.
   e) ಇಸ್ರೋ ಕಾಲೋನಿ ಹತ್ತಿರ ರಸ್ತೆಯಲ್ಲಿ ಕಸ ವಿಲೇವಾರಿ ಮಾಡುವವರಿಗೆ ದಂಡ ವಿಧಿಸುವ ಬಗ್ಗೆ.

2. **ಶ್ರೀ ಶ್ರೀನಿವಾಸ ರೆಡ್ಡಿ ರವರು ತಿಳಿಸಿದ ಸಮಸ್ಯೆಗಳು.**
   a. ದೊಮ್ಮಲೂರು ಬಡಾವಣೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮೈದಾನದ ಸುತ್ತಲು ಫುಟ್‌ಪಾತ್ ಸರಿಪಡಿಸುವ ಬಗ್ಗೆ ಮತ್ತು ಸ್ವಚ್ಛತೆ ಕಾಪಾಡುವ ಕುರಿತು.
   b. ದೊಮ್ಮಲೂರು ಬಡಾವಣೆಯ 5ನೇ ಬಿ ಅಡ್ಡರಸ್ತೆಯಲ್ಲಿರುವ ಒಣಗಿದ ಮರವನ್ನು ತೆರವುಗೊಳಿಸಲು ಕೋರಿದರು.
   c. ದೊಮ್ಮಲೂರು ಬಡಾವಣೆಯ 2ನೇ ಮುಖ್ಯರಸ್ತೆಯ ಮನೆ ನಂ. 153 ರ ಎದುರಿನಲ್ಲಿ ಅಳವಡಿಸಿರುವ ಬೀದಿ ದೀಪ ದುರಸ್ಥಿಗೊಂಡಿದ್ದು, ಬದಲಾಯಿಸಲು ಕೋರಿರುತ್ತಾರೆ.

d. ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಕನಕದಾಸ ಪಾರ್ಕ್‌ಗೆ ಅಳವಡಿಸಿರುವ Steel grills ಮತ್ತು ಫುಟ್‌ಪಾತ್ ಉತ್ತಮ ಗುಣಮಟ್ಟದಲ್ಲಿರುತ್ತದೆ, ಆದರೆ ಪಾಲಿಕೆಯ ಯೋಜನಾ ವಿಭಾಗದಿಂದ ಇದನ್ನು ತೆರವುಗೊಳಿಸಲಾಗುತ್ತಿರುತ್ತದೆ. ಈ ಕುರಿತು ವಿವರಣೆ ನೀಡುವಂತೆ ಕೋರಿರುತ್ತಾರೆ.

e. ಇಸ್ರೋ ಗೇಟ್ ಪಕ್ಕದಲ್ಲಿರುವ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

## ಸಭೆಯ ನಡಾವಳಿಗಳು

1. **ವಾರ್ಡ್ ಸಮಿತಿ ಸದಸ್ಯರಾದ ಶ್ರೀ. ವಿಜಯ್ ಎಂ. ಜಿ ರವರು ಮಾತನಾಡಿ ಈ ಕೆಳಗಿನ ಸಮಸ್ಯೆಗಳನ್ನು ಪರಿಹರಿಸಲು ಮನವಿ ಮಾಡಿರುತ್ತರೆ:**

**a)** ಕೇಂಬ್ರಿಡ್ಜ್ ಬಡಾವಣೆಯಲ್ಲಿರುವ ಉದ್ಯಾನವನವು ನಿರ್ವಹಣೆ ಇಲ್ಲದೇ ಬಹಳ ಕೆಟ್ಟ ಪರಿಸ್ಥಿತಿಯಲ್ಲಿರುತ್ತದೆ, ಆದ್ದರಿಂದ ದಯಮಾಡಿ ಈ ಉದ್ಯಾನವನವನ್ನು ಪಾಲಿಕೆಯಿಂದ ಸಮರ್ಪಕವಾಗಿ ನಿರ್ವಹಣೆ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಮಾತನಾಡಿದ ನೋಡಲ್ ಅಧಿಕಾರಿಗಳು, ಪಾಲಿಕೆಯ ತೋಟಗಾರಿಕ ಇಲಾಖೆಯವರಿಗೆ ಸಮಸ್ಯೆಯ ಬಗ್ಗೆ ತಿಳಿಸಿ, ಉದ್ಯಾನವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

**b)** ಕೇಂಬ್ರಿಡ್ಜ್ ಬಡಾವಣೆಯ 1ನೇ ಎ ಅಡ್ಡರಸ್ತೆ ಮತ್ತು 2ನೇ ಮುಖ್ಯರಸ್ತೆಗಳಲ್ಲಿ ಯುವಕರು ಅತಿ ವೇಗದಲ್ಲಿ ವಾಹನಗಳನ್ನು ಓಡಿಸುವುದರಿಂದ ಮತ್ತು ವ್ಹೀಲಿಂಗ್ ಮಾಡುವುದರಿಂದ ಇಲ್ಲಿನ ನಿವಾಸಿಗಳಿಗೆ ಬಹಳ ತೊಂದರೆ ಆಗುತ್ತಿರುತ್ತದೆಂದು ತಿಳಿಸಿ ಈ ರಸ್ತೆಗಳಲ್ಲಿ Road Hump ಹಾಕಲು ಮನವಿ ಮಾಡಿರುತ್ತಾರೆ.

ಈ ಬಗ್ಗೆ ಸಂಚಾರಿ ಪೋಲೀಸರಿಗೆ ಮತ್ತು ಪಾಲಿಕೆಯ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೂ ಸಹ ಈಗಾಗಲೇ ಪತ್ರ ಬರೆದು ಕೋರಲಾಗಿದೆ, ಕೂಡಲೇ Road Hump ಹಾಕಿಸಲು ಕ್ರಮಕೈಗೊಳ್ಳಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

**c)** ಡಾ|| ರಾಜ್ ಕುಮಾರ್ ಪಾರ್ಕಿನಲ್ಲಿರುವ Shuttle court ಹಾಳಾಗಿದ್ದು, ಇದನ್ನು ದುರಸ್ಥಿ ಮಾಡಿಸಿಕೊಡಬೇಕೆಂದು ದೊಮ್ಮಲೂರು ನಿವಾಸಿಗಳು ಮತ್ತು Shuttle Cock Sports Association ರವರ ಪರವಾಗಿ ಶ್ರೀ ವಿಜಯ್ ಎಂ. ಜಿ. ರವರು ಮನವಿ ಮಾಡಿರುತ್ತಾರೆ.

ಉದ್ಯಾನವನದಲ್ಲಿರುವ Shuttle court ನ್ನು ಪಾಲಿಕೆಯ ತೋಟಗಾರಿಕ ಇಲಾಖೆವತಿಯಿಂದ ಅಭಿವೃದ್ಧಿಪಡಿಸಬೇಕಾಗಿರುವುದರಿಂದ ಈ ಬಗ್ಗೆ ಸದರಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಕೂಡಲೇ Shuttle court ನ್ನು ದುರಸ್ಥಿ ಮಾಡಿಸಲು ಕ್ರಮಕೈಗೊಳ್ಳಲಾಗುವುದು ಎಂದು ನೋಡಲ್ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

**d)** ವಾರ್ಡಿನಲ್ಲಿ ಪೋಲೀಸ್ ಇಲಾಖೆ ವತಿಯಿಂದ Peace committee ರಚಿಸಲು ಮಾನ್ಯ ಶಾಸಕರು ಸಂಬಂಧಪಟ್ಟ ಪೋಲೀಸ್ ಠಾಣೆಗಳಿಗೆ ಸೂಚನೆ ನೀಡಿರುತ್ತಾರೆ. ಆದರೆ ಇದುವರೆಗೂ ಈ ವಿಷಯದಲ್ಲಿ ಯಾವುದೇ ಬೆಳವಣಿಗೆ ಕಂಡುಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿಗಳು, ಈ ಬಗ್ಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

e) ಶ್ರೀ ವಿಜಯ್ ರವರು ಇಸ್ರೋ ಕಾಲೋನಿ ಹತ್ತಿರ ರಸ್ತೆಯಲ್ಲಿ ಕಸ ವಿಲೇವಾರಿ ಮಾಡುವ ಜನರಿಗೆ ದಂಡ ವಿಧಿಸಿದಲ್ಲಿ, ಜನರಿಗೆ ಅರಿವು ಮೂಡಿ, ಮತ್ತೆ ಈ ರೀತಿ ಕಸವನ್ನು ರಸ್ತೆಯಲ್ಲಿ ಹಾಕುವುದಿಲ್ಲವೆಂದು ತಿಳಿಸಿ, ರಸ್ತೆಯಲ್ಲಿ ಕಸ ವಿಲೇವಾರಿ ಮಾಡುವವರಿಗೆ ದಂಡ ವಿಧಿಸುವಂತೆ ಕೋರಿರುತ್ತಾರೆ.

ನೋಡಲ್ ಅಧಿಕಾರಿಗಳು, ಈ ಬಗ್ಗೆ ವಾರ್ಡಿನ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಪುರುಷೋತ್ತಮ ರವರಿಗೆ ಇಸ್ರೋ ಕಾಲೋನಿ ಹತ್ತಿರ ರಸ್ತೆಯಲ್ಲಿ ಕಸ ವಿಲೇವಾರಿ ಮಾಡುವ ಜನರಿಗೆ ದಂಡ ವಿಧಿಸುವಂತೆ ಮತ್ತು ಕಸವನ್ನು ರಸ್ತೆಯಲ್ಲಿ ವಿಲೇವಾರಿ ಮಾಡದಂತೆ ಅರಿವು ಮೂಡಿಸುವಂತೆ ಸೂಚಿಸಿದರು.

2. ಶ್ರೀ. ಶ್ರೀನಿವಾಸ ರೆಡ್ಡಿ ರವರು ಮಾತನಾಡಿ ಈ ಕೆಳಗಿನ ಸಮಸ್ಯೆಗಳನ್ನು ಪರಿಹರಿಸಲು ಮನವಿ ಮಾಡಿರುತ್ತರೆ:

a. ದೊಮ್ಮಲೂರು ಬಡಾವಣೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮೈದಾನದ ಸುತ್ತಲು ಫುಟ್‌ಪಾತ್ ಹಾಳಾಗಿದ್ದು, ಇದನ್ನು ಸರಿಪಡಿಸುವಂತೆ ಮತ್ತು ಕಾಲೇಜಿನ ಸುತ್ತಲು ಸ್ವಚ್ಛತೆ ಕಾಪಾಡಲು ಮನವಿ ಮಾಡಿರುತ್ತಾರೆ.

ಈ ಬಗ್ಗೆ ನೋಡಲ್ ಅಧಿಕಾರಿಗಳು, ವಾರ್ಡಿನ ಸಹಾಯಕ ಇಂಜಿನಿಯರ್ ರವರಿಗೆ ಕೂಡಲೇ ಫುಟ್‌ಪಾತ್ ಸರಿಪಡಿಸಲು ಹೊಸ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಕ್ರಮಕೈಗೊಳ್ಳುವಂತೆ ಸಭೆಯಲ್ಲಿಯೇ ಸೂಚಿಸಿದರು ಮತ್ತು ಘನತ್ಯಾಜ್ಯ ನಿರ್ವಹಣೆ ವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕಾಲೇಜಿನ ಪರಿಸರದಲ್ಲಿ ಸ್ವಚ್ಛತೆಯನ್ನು ಕಾಪಾಡುವಂತೆ ಸೂಚನೆ ನೀಡಿರುತ್ತಾರೆ.

b. ದೊಮ್ಮಲೂರು ಬಡಾವಣೆಯ 5ನೇ ಬಿ ಅಡ್ಡರಸ್ತೆಯಲ್ಲಿ ಒಂದು ಒಣಗಿದ ಮರ ಇದ್ದು, ಯಾವುದೇ ಸಮಯದಲ್ಲಿ ಬೀಳುವ ಹಂತದಲ್ಲಿರುತ್ತದೆ ಎಂದು ತಿಳಿಸಿ ಕೂಡಲೇ ತೆರವುಗೊಳಿಸಬೇಕೆಂದು ಕೋರಿದರು.

ಈ ಬಗ್ಗೆ ನೋಡಲ್ ಅಧಿಕಾರಿಗಳು, ಅರಣ್ಯ ಇಲಾಖೆಯ ಸಿಬ್ಬಂದಿ ಶ್ರೀ ದೇವರಾಜ್ ರವರಿಗೆ ಆದಷ್ಟು ಬೇಗ ಒಣಗಿದ ಮರವನ್ನು ತೆರವು ಮಾಡಿ, ವರದಿ ಮಾಡುವಂತೆ ಸೂಚನೆ ನೀಡಿದರು.

c. ದೊಮ್ಮಲೂರು ಬಡಾವಣೆಯ 2ನೇ ಮುಖ್ಯರಸ್ತೆಯ ಮನೆ ನಂ. 153 ರ ಎದುರಿನಲ್ಲಿ ಅಳವಡಿಸಿರುವ ಬೀದಿ ದೀಪ ದುರಸ್ಥಿಗೊಂಡಿದ್ದು, ಬದಲಾಯಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ನೋಡಲ್ ಅಧಿಕಾರಿಗಳು, ಪಾಲಿಕೆಯ ವಿದ್ಯುತ್ ವಿಭಾಗ ಸಹಾಯಕ ಅಭಿಯಂತರರಾದ ಶ್ರೀ. ಮಂಜಪ್ಪ ರವರಿಗೆ ಕೂಡಲೇ ಬೀದಿ ದೀಪವನ್ನು ಸರಿಪಡಿಸಿ ವರದಿ ಮಾಡುವಂತೆ ಸಭೆಯಲ್ಲಿಯೇ ಸೂಚನೆ ನೀಡಿದರು.

d. ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಕನಕದಾಸ ಪಾರ್ಕ್‌ಗೆ ಅಳವಡಿಸಿರುವ Steel grills ಮತ್ತು ಫುಟ್‌ಪಾತ್ ಉತ್ತಮ ಗುಣಮಟ್ಟದಲ್ಲಿರುತ್ತದೆ, ಆದರೆ ಪಾಲಿಕೆಯ ಯೋಜನಾ ವಿಭಾಗದಿಂದ ಇದನ್ನು ತೆರವುಗೊಳಿಸಲಾಗುತ್ತಿರುತ್ತದೆ. ಈ ಕುರಿತು ವಿವರಣೆ ನೀಡುವಂತೆ ಕೋರಿರುತ್ತಾರೆ.

ಈ ಬಗ್ಗೆ ನೋಡಲ್ ಅಧಿಕಾರಿಗಳು, ಸದರಿ ಕಾಮಗಾರಿಯನ್ನು ಪಾಲಿಕೆಯ ಯೋಜನಾ ವಿಭಾಗದಿಂದ ನಿರ್ವಹಿಸುತ್ತಿದ್ದು, ಕೂಡಲೇ ಸದರಿ ವಿಭಾಗದ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದು ಮುಂದಿನ ಸಭೆಯಲ್ಲಿ ಸಭೆಗೆ, ಸದರಿ ಅಧಿಕಾರಿಗಳಿಂದಲೇ ವಿವರಣೆಯನ್ನು ಸಮಿತಿಗೆ ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

**e.** ಶ್ರೀನಿವಾಸ ರೆಡ್ಡಿ ರವರು ಮತ್ತು ವಾರ್ಡ್ ಸಮಿತಿ ಸದಸ್ಯರಾದ ಶ್ರೀ. ಕುಮಾರ್ ರವರು ಇಸ್ರೋ ಗೇಟ್ ಪಕ್ಕದಲ್ಲಿರುವ ರಸ್ತೆಯು ಎಷ್ಟೋ ಬಾರಿ Asphalt ಮಾಡಿ ಅಭಿವೃದ್ಧಿಪಡಿಸಿದರು ಈ ರಸ್ತೆಯಲ್ಲಿ ಪದೇ ಪದೇ ಗುಂಡಿಗಳ ಸಮಸ್ಯೆ ಎದುರಾಗುತ್ತಿರುತ್ತದೆ. ಆದ್ದರಿಂದ ಈ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ, ಸದರಿ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಅಗತ್ಯ ಕ್ರಮವಹಿಸಲಾಗುವುದು ಎಂದು ಮತ್ತು ಅನುದಾನ ಲಭ್ಯತೆಯ ಬಗ್ಗೆ ಪರಿಶೀಲಿಸಿ ತುರ್ತಾಗಿ ಕಾಮಗಾರಿ ನಿರ್ವಹಿಸಲಾಗುವುದು ಎಂದು ತಿಳಿಸಿದರು.

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಹಾಜರಾಗಿದ್ದ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 112 ದೊಮ್ಮಲೂರು ಮತ್ತು**
**ಸಹಾಯಕ ಕಾರ್ಯಪಾಲಕ ಅಭಿಯಂತರರು**
**ದೊಮ್ಮಲೂರು ಉಪ ವಿಭಾಗ**
**ಬಿ.ಬಿ.ಎಂ.ಪಿ**

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.